# 27-07-2026

ವಿದ್ಯಾವರ್ಧಕ ಸಂಘ (ರಿ), ಮೈಸೂರು

**ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು**

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570001

ಇತಿಹಾಸ ವಿಭಾಗ

ವಿಶೇಷ ಉಪನ್ಯಾಸ ಮಾಲೆ ೨೦೨೬–೨೭

ವಿಷಯ

"ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ"

ಸಂಪನ್ಮೂಲ ವ್ಯಕ್ತಿಗಳು

ಶ್ರೀ. ಮಂಜುನಾಥ್ ಎಚ್ ಎಲ್
ಉಪನಿರ್ದೇಶಕರು
ಕರ್ನಾಟಕ ರಾಜ್ಯ ಪತ್ರಾಗಾರ ಮತ್ತು ಗೆಜೆಟಿಯರ್ ಇಲಾಖೆ,
ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.

ಶ್ರೀಮತಿ ಸವಿತ ಕೆ ಎಸ್
ಮುಖ್ಯಸ್ಥರು, ಇತಿಹಾಸ ವಿಭಾಗ

ಶ್ರೀ. ಶಶಿಧರ್ ಎಸ್
ಅಧ್ಯಾಪಕ ಸಲಹೆಗಾರರು

ಡಾ. ಎಸ್ ಮರೀಗೌಡ
ಪ್ರಾಂಶುಪಾಲರು

ದಿನಾಂಕ: ೨೭–೦೭–೨೦೨೬ | ಸೋಮವಾರ ಸಮಯ ೧೧.೦೦ ಗಂಟೆ | ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ

## "ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ" ವಿಷಯ ಕುರಿತು ವಿಶೇಷ ಉಪನ್ಯಾಸ

ನಮಗೆ ತಿಳಿಯದ ಇತಿಹಾಸವನ್ನು ತಿಳಿಯಬೇಕಾದರೆ ದಾಖಲೆಗಳು ಬಹುಮುಖ್ಯ ಹಾಗೂ ಪ್ರಮುಖ ಆಧಾರಗಳಾಗಿವೆ. ಈ ಆಧಾರಗಳ ಮೂಲಕ ಸತ್ಯ ಸಂಗತಿಗಳನ್ನು ವಿದ್ಯಾರ್ಥಿಗಳು ತಿಳಿಯುವ ಪ್ರಯತ್ನವನ್ನು ಮಾಡಬೇಕೆಂದು ಎಂದು ಮೈಸೂರಿನ ಕರ್ನಾಟಕ ರಾಜ್ಯ ಪತ್ರಗಾರ ಮತ್ತು ಗೆಜ಼ೆಟಿಯರ್ ಇಲಾಖೆ, ವಿಭಾಗೀಯ ಪತ್ರಗಾರ ಕಛೇರಿಯ ಉಪನಿರ್ದೇಶಕರಾದ ಶ್ರೀ ಮಂಜುನಾಥ್.ಎಚ್.ಎಲ್ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ "ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ" ಎಂಬ ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಅವರು ಮಾತನಾಡುತ್ತಿದ್ದರು. ಕಾರ್ಲ್ ಮಾರ್ಕ್ಸ್ ಅವರು ಹೇಳಿರುವಂತೆ ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸ. ಇಂದು ವಿಜಯನಗರ ಸಾಮ್ರಾಜ್ಯದ ವೈಭವ ತಿಳಿಯಲು ಹಾಗೂ ಇನ್ನೂ ಅನೇಕ ರಾಜ ವಂಶಗಳ ಇತಿಹಾಸವನ್ನು ತಾಳೆಗರಿಗಳು, ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು ದಾಖಲೆಗಳ ರೂಪದಲ್ಲಿ ದೊರೆತಿರುವುದು ಸಹಕಾರಿಯಾಗಿದೆ. ಸಿಂಧೂ ನಾಗರೀಕತೆಯನ್ನು ಅರಿಯುವಲ್ಲಿ ದಾಖಲೆಗಳ ಪಾತ್ರ ಮಹತ್ವದ್ದಾಗಿದೆ. ಗ್ರೀಕ್ ಮತ್ತು ಪರ್ಷಿಯನ್ನರ ಯುದ್ಧಗಳ ತಂತ್ರಗಾರಿಕೆ ಹಾಗೂ ವೈಜ್ಞಾನಿಕ ವಿಷಯಗಳನ್ನು ಕುರಿತು ಬರಹಗಾರರು ದಾಖಲೆಗಳಲ್ಲಿ ಸಂಗ್ರಹಿಸಿದ್ದಾರೆ. ಮೈಸೂರು ರಾಜರ ವಂಶಾವಳಿ ಮತ್ತು ಅವರ ಆಡಳಿತದ ಪ್ರಾಮುಖ್ಯತೆಯ ಬಗ್ಗೆ ತಿಳಿಸುತ್ತಾ, ಆರಂಭದಲ್ಲಿ ಗಂಧದ ಅರಮನೆ ಮೈಸೂರಿನಲ್ಲಿ ಇತ್ತು ನಂತರ ಅದು ೧೮೯೭ರಲ್ಲಿ ಬೆಂಕಿಗೆ ಆಹುತಿಯಾಗಿ ನಾಶವಾಯಿತು, ಇಂದಿನ ಹೊಸ ಅರಮನೆ ೧೯೧೨ರಲ್ಲಿ ನಿರ್ಮಾಣವಾಯಿತು. ಅಂಬಾರಿ ಹೊತ್ತಿದ್ದ ಪ್ರೀತಿಯ ಆನೆ ಜಯಮಾರ್ತಾಂಡ ಹೆಸರನ್ನು ಅರಮನೆಯ ಮುಖ್ಯ ದ್ವಾರಕ್ಕೆ ಇಡಲಾಗಿದೆ. ಅರಸರು ಮೊದಲಬಾರಿಗೆ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ಕೇಂದ್ರವನ್ನು ಸ್ಥಾಪಿಸಿ ವಿದ್ಯುತ್‌ಅನ್ನು ಕೋಲಾರ ಚಿನ್ನದ ಗಣಿಗೆ ನೀಡಿ, ನಂತರ ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಒದಗಿಸಿದರು. ಕಾಲರಾ ಖಾಯಿಲೆಗೆ ಔಷಧಿಯನ್ನು ಲಂಡನ್‌ನಿಂದ ತರಿಸಿ ಉಚಿತವಾಗಿ ಹಂಚಿದರು. ಮೈಸೂರು ಮೃಗಾಲಯವನ್ನು, ಗಜಶಾಲೆಗಳನ್ನು ನಿರ್ಮಿಸಿದ್ದರು. ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಹುಲಿ ಸಂರಕ್ಷಣಾ ಕಾಯಿದೆಯನ್ನು ಜಾರಿಗೊಳಿಸಿದ್ದರು. ಈ ಎಲ್ಲಾ ಮಾಹಿತಿಗಳು ನಮಗೆ ದೊರೆತಿರುವ ದಾಖಲೆಗಳಿಂದ ತಿಳಿಯುತ್ತದೆ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಮ್ಮ ಬಿಡುವಿನ ವೇಳೆಯಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಪತ್ರಗಾರ ಮತ್ತು ಗೆಜ಼ೆಟಿಯರ್ ಇಲಾಖೆ, ವಿಭಾಗೀಯ ಪತ್ರಗಾರ ಕಛೇರಿಗೆ ಭೇಟಿ ನೀಡಿದರೆ ಇನ್ನೂ ಅನೇಕ ದಾಖಲಾತಿಗಳನ್ನು ವೀಕ್ಷಿಸಬಹುದು ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಅವರು ನಮ್ಮ ಕಾಲೇಜಿನಲ್ಲಿ ಪ್ರತೀ ವರ್ಷವೂ ಎಲ್ಲಾ ವಿಭಾಗಗಳಿಂದ ವಿಶೇಷ ಉಪನ್ಯಾಸ, ಕಾರ್ಯಗಾರ, ವಿಚಾರ ಗೋಷ್ಠಿ ಹಾಗೂ ಸಮ್ಮೇಳನಗಳನ್ನು ಆಯೋಜಿಸಿಕೊಂಡು ಬರುತ್ತಲೇ ಇದ್ದೇವೆ. ಇತಿಹಾಸವನ್ನು ಅರಿಯದವನು ಇತಿಆಸವನ್ನು ಸೃಷ್ಟಿಸಲಾರ. ಇಂದು ಇತಿಹಾಸ ವಿಭಾಗದ ವತಿಯಿಂದ ಆಯೋಜಿಸಿರುವ ವಿಶೇಷ ಉಪನ್ಯಾಸವು ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗುತ್ತದೆ ಎಂದು ನಂಬಿದ್ದು, ವಿದ್ಯಾರ್ಥಿಗಳು ಇಂತಹ ಉಪನ್ಯಾಸಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾಹಿತಿಯನ್ನು ಪುಸ್ತಕಗಳಲ್ಲಿ ದಾಖಲಿಸಿಕೊಂಡರೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುತ್ತವೆ ಎಂದರು.

ಶ್ರೀಮತಿ ಸವಿತಾ.ಕೆ.ಎಸ್ ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ವಿದ್ಯಾಥಿಗಳು ಭಾಗವಹಿಸಿದ್ದರು. ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀಮತಿ ಯಮುನ.ಎಂ.ಜೆ. ನಿರೂಪಿಸಿ ವಂದಿಸಿದರು.


ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001
ಇತಿಹಾಸ ವಿಭಾಗ
ವಿಶೇಷ ಉಪನ್ಯಾಸ ಮಾಲೆ
ವಿಷಯ
"ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ"
ಸಂಪನ್ಮೂಲ ವ್ಯಕ್ತಿಗಳು
ಶ್ರೀ. ಮಂಜುನಾಥ್ ಎಚ್ ಎಲ್
ಉಪನಿರ್ದೇಶಕರು
ಕರ್ನಾಟಕ ರಾಜ್ಯ ಪತ್ರಗಾರ ಮತ್ತು ಗೆಜೆಟಿಯರ್ ಇಲಾಖೆ,
ಶ್ರೀಮತಿ ಸವಿತ ಕೆ ಎಸ್
ಮುಖ್ಯಸ್ಥರು, ಇತಿಹಾಸ ವಿಭಾಗ
ಡಾ.ಎಸ್.ಮರೀಗೌಡ
ಶ್ರೀಮತಿ.ಕೆ.ಎಸ್.ಸವಿತ












ವಂದನೆಗಳು